ಬೆಂಗಳೂರು ನಗರದಲ್ಲಿ, ಮುಂಬಯಿ, ಕಲ್ಕತ್ತ ಹಾಗೂ ದೆಹಲಿಗಳಲ್ಲಿರುವಂತೆ ಟ್ಯಾಕ್ಸಿ ಸ್ಟ್ಯಾಂಡ್‌ಗಳಲ್ಲಿ ದೂರವಾಣಿಯ ಮೂಲಕ ಸಾರಿಗೆ ಸೌಕರ್ಯಕ್ಕೆ ಮನವಿ

ಶ್ರೀ ಕೆ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ರಸ್ತೆ ಸಾರಿಗೆ ವ್ಯವಸ್ಥೆ, ಬೆಳೆಯುತ್ತಿರುವ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನಲ್ಲಿ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಟ್ಯಾಕ್ಸಿ, ರಿಕ್ಷಾಗಳ ಹಾಗೂ ಬಸ್ಸುಗಳು ಸಕಾಲಕ್ಕೆ ಸಿಕ್ಕದೆ ಪ್ರಯಾಣಿಕರಿಗೆ ಅದರಲ್ಲೂ ಗರ್ಭಿಣಿ ಸ್ತ್ರೀಯರಿಗೆ, ವೃದ್ಧರಿಗೆ, ಕುಟುಂಬದ ಪರಿವಾರದವರಿಗೆ ಕಾಲಕ್ಕೆ ಸರಿಯಾಗಿ ದೊರೆಯದೆ ಸಮಸ್ಯೆಯಾಗಿರುತ್ತದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಪರವಾನಗಿ ಕಲ್ಪಿಸಿ ಮುಖ್ಯಸ್ಥಳಗಳಲ್ಲಿ ಟ್ಯಾಕ್ಸಿ ಸ್ಟ್ಯಾಂಡ್ ನಿರ್ಮಿಸಿ ದೂರವಾಣಿ ಮೂಲಕ ಕರೆಯುವ ಸೌಕರ್ಯ ಕಲ್ಪಿಸಿ ದೇಶದ ಮುಂಬಯಿ, ಕಲ್ಕತ್ತ, ಹಾಗೂ ದೆಹಲಿ, ಮಹಾನಗರಗಳಲ್ಲಿರುವಂತೆ ಸರ್ಕಾರ ಸೌಕರ್ಯ ಕಲ್ಪಿಸಲು ಈ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಕೆ. ಲಕ್ಕಪ್ಪನವರು ನಿಯಮ ೩೩೪ ರ ಮೇರೆಗೆ ನೀಡಿರುವ ಸೂಚನೆಗೆ ತಮ್ಮ ಅಪ್ಪಣೆಯನ್ನು ಪಡೆದು ಈ ಕೆಳಕಂಡ ಉತ್ತರವನ್ನು ನೀಡುಬಯಸುತ್ತೇನೆ.

ದಿನಾಂಕ ೧-೨-೮೯ ರಿಂದ ಜಾರಿಗೆ ಬಂದಿರುವ ಹೊಸ ಮೋಟಾರು ವಾಹನ ಕಾಯ್ದೆ ೧೯೮೮ ರ ಮೇರೆಗೆ ಕಂಟ್ರಾಕ್ಟ್ ಕ್ಯಾರೇಜ್ ಹಾಗೂ ವಿಶೇಷ ಪರವಾನಗಿಗಳನ್ನು ಹೊರತು ಪಡಿಸಿ ಯಾವುದೇ ತರಹದ ವಾಹನದ ಪರವಾನಗಿಗಳನ್ನು ನಿರ್ಬಂಧವಿಲ್ಲದೆ ನೀಡಬಹುದಾಗಿದೆ.

ಬೆಂಗಳೂರು ನಗರದಲ್ಲಿ ಸಾರಿಗೆ ಪ್ರಯಾಣಿಕರ ಅವಶ್ಯಕತೆಗನುಗುಣವಾಗಿ ಆಟೋರಿಕ್ಷಾ ಹಾಗೂ ಟ್ಯಾಕ್ಸಿ ಕ್ಯಾಬ್‌ಗಳಿಗೆ ಯಾವ ನಿರ್ಬಂಧವಿಲ್ಲದೆ ಪರವಾನಗಿಗಳನ್ನು ನೀಡಲಾಗುತ್ತಿದೆ.

ಬೆಂಗಳೂರು ನಗರ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ಸುಗಳನ್ನು ಕಾಲಕ್ಕೆ ಸರಿಯಾಗಿ ಓಡಿಸಲು ಕ್ರಮ ಕೈಗೊಳ್ಳುತ್ತಿದೆ.

ಸಾರಿಗೆ ಇಲಾಖೆಯು ಈಗಾಗಲೇ ಬೆಂಗಳೂರು ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರೊಡನೆ ಸಮಾಲೋಚಿಸಿ ಬೆಂಗಳೂರು ನಗರದಲ್ಲಿ ದೂರವಾಣಿ ಸೌಲಭ್ಯವನ್ನೊಳಗೊಂಡ ಟ್ಯಾಕ್ಸಿ ಮತ್ತು ಆಟೋರಿಕ್ಷಾ ನಿಲ್ದಾಣಗಳನ್ನು ನಿರ್ಮಿಸುವ ಬಗ್ಗೆ ಈಗಾಗಲೇ ೧೩ ಆಯ್ದ ಸ್ಥಳಗಳನ್ನು ಗುರುತಿಸಲಾಗಿದೆ.

ದೂರವಾಣಿ ಸೌಲಭ್ಯಗಳಿಗೊಂಡ ಈ ಟ್ಯಾಕ್ಸಿ ಮತ್ತು ಆಟೋರಿಕ್ಷಾ ನಿಲ್ದಾಣಗಳನ್ನು ನಿರ್ಮಿಸುವ ಬಗ್ಗೆ ಸ್ಥಳಗಳನ್ನು ಆಯ್ಕೆ ಮಾಡಿ ನಿಯಮಾನುಸಾರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ಮಂಡಿಸಿ ನಂತರ ಸೂಚನೆಗಳನ್ನು ಹೊರಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಬೆಂಗಳೂರು ಅವರಿಗೆ ಈಗಾಗಲೇ ಸೂಕ್ತ ಮಾರ್ಗದರ್ಶನಗಳನ್ನು ನೀಡಲಾಗಿದೆ. ದೂರವಾಣಿ ಸೌಲಭ್ಯಗಳನ್ನೊಳಗೊಂಡ ಟ್ಯಾಕ್ಸಿ ಮತ್ತು ಆಟೋರಿಕ್ಷಾ ನಿಲ್ದಾಣಗಳನ್ನು ಆದಷ್ಟು ಬೇಗನೇ ಪ್ರಾರಂಭಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು.—ಈಗ ಸಭೆಯು ಮುಂದುವರೆದು ಮಂತ್ರೆ ೨.೩೦ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ೧.೩೦ಕ್ಕೆ ಮುಕ್ತಯವಾಗಿ ಮತ್ತೆ ೨.೩೦ಕ್ಕೆ ಸೇರಲು ನಿಶ್ಚಯಿಸಿತು).

(ಸದನವು ಪುನಃ ೨-೪೫ ನಿಮಿಷಗಳಿಗೆ ಪ್ರಾರಂಭವಾಯಿತು)

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)